ನೋಡಿ ಬಾ..' ಎಂದು ಆದೇಶಿಸಿತು.

'ಸರಿ' ಎಂದು ಮಂಗಣ್ಣ ಛಂಗ್ ಛಂಗ್ ಎಂದು ಮರದಿಂದ ಮರಕ್ಕೆ ಜಿಗಿಯುತ್ತ ಹೊರಟಾಗ, ಅದರ ಕಣ್ಣಿಗೆ ದಾರಿಯಲ್ಲಿ ಜಿಂಕೆ ಬಿದ್ದಿರುವುದು, ಅದರ ಪಕ್ಕ ಮೊಲ ಕುಳಿತಿರುವುದು ಕಂಡಿತು. ಆಶ್ಚರ್ಯಗೊಂಡ ಮಂಗಣ್ಣ, 'ಏನಾದರಾಗಲಿ ಹತ್ತಿರ ಹೋಗಿ ನೋಡಿ ಬರೋಣ' ಎಂದು ಮತ್ತೊಂದು ಮರಕ್ಕೆ ಜಿಗಿದಾಗ, ಅನತಿ ದೂರದಲ್ಲಿ ಬೇಟೆಗಾರನೊಬ್ಬ ಬಲೆ ಕಟ್ಟಿರುವುದು ಹಾಗೂ ಆಗಾಗ ಕುತೂಹಲದಿಂದ ಜಿಂಕೆ ಮತ್ತು ಮೊಲ ಬರಬೇಕಿದ್ದ ದಾರಿಯಲ್ಲಿ ಇಣುಕುತ್ತಿದ್ದುದನ್ನು ಕಂಡಿತು. ಛೇ... ಏನೂ ಅರಿಯದ ಈ ಪುಕ್ಕಲು ಪ್ರಾಣಿಗಳು ಎದ್ದು ಹೋಗಿ ಆ ಬೇಟೆಗಾರನ ಬಲೆಯೊಳಗೆ ಸಿಲುಕುವ ಮುನ್ನ, ತಾನು ಹೇಗಾದರೂ ಅವುಗಳ ಪ್ರಾಣ ಉಳಿಸಬೇಕೆಂದು ಪಣ ತೊಟ್ಟಿತು.

ಮತ್ತೆ ಮರದಿಂದ ಮರಕ್ಕೆ ಹಾರುತ್ತ ಅಂತೂ ಆ ಬೇಟೆಗಾರ ಕುಳಿತ ಸ್ಥಳದ ಹಿಂಬದಿ ಇದ್ದ ತೆಂಗಿನ ಮರದ ತುದಿಗೆ ಬಂದು ಕುಳಿತಿತು. ಒಮ್ಮೆ ಅತ್ತ ಇತ್ತ ನೋಡುತ್ತ, ತನ್ನಲ್ಲಿದ್ದ ಬಲವನ್ನೆಲ್ಲ ಪ್ರಯೋಗಿಸಿ ದೊಡ್ಡ ಗಾತ್ರದ ಎಳನೀರು ಕಿತ್ತು, ಸರಿಯಾಗಿ ಆ ಬೇಟೆಗಾರನ ತಲೆ ಮೇಲೆ ಬೀಳುವಂತೆ ರಪ್ ಎಂದು ಎಸೆಯಿತು. ಅಷ್ಟು ದಪ್ಪದ ಕಾಯಿ ಬಿದ್ದ ರಭಸಕ್ಕೆ ಆತ ಜೋರಾಗಿ 'ಅಯ್ಯೋ... ಅಮ್ಮಾ..' ಎಂದು ಅರಚುತ್ತಾ ಪ್ರಜ್ಞೆ ತಪ್ಪಿ ಬಿದ್ದುಬಿಟ್ಟ. ಅಷ್ಟರಲ್ಲಿ ಆ ಜಿಂಕೆ ಮತ್ತು ಮೊಲ ಸುಧಾರಿಸಿಕೊಂಡು ಇನ್ನೇನು ಓಡಲು ಸಿದ್ಧತೆ ಮಾಡಿಕೊಳ್ಳುವುದನ್ನು ಕಂಡ ಮಂಗಣ್ಣ ದಡಬಡನೆ ಅವುಗಳ ಬಳಿ ಬಂದು ನಡೆದುದೆಲ್ಲವನ್ನೂ ವಿವರಿಸಿತು. ವಿಷಯ ಅರಿತ ಅವು ಓಟದ ಯೋಚನೆ ನಿಲ್ಲಿಸಿ, ಮಂಗಣ್ಣನೊಂದಿಗೆ ಸಿಂಹದ ಬಳಿ ಬಂದವು.

ಜಿಂಕೆ ಮತ್ತು ಮೊಲ, ತಮ್ಮಿಬ್ಬರ ಪ್ರಾಣ ಉಳಿಸಲು ಮಂಗಣ್ಣ ಮಾಡಿದ ಸಾಹಸದ ಕಥೆ ಸಿಂಹಕ್ಕೆ ಹೇಳಿದಾಗ, ಅದು ಹರುಷಗೊಂಡು ಮಂಗಣ್ಣನ ಸಾಹಸ ಕೊಂಡಾಡಿ ಅದರ ಬೆನ್ನು ಚಪ್ಪರಿಸಿತು. ■



ಚಿತ್ರ: ವಿಜಯಕುಮಾರಿ

# ಗಾಂಧೀ ಚಿತ್ರ

■ **ವಾ. ಮುರಳೀಧರ, ತೀರ್ಥಹಳ್ಳಿ.**

ಪೇಟೆಗೆ ಹೊರಟನು ಪಾಪಣ್ಣ
ಇದ್ದಿತು ಅವನಲಿ ಸ್ವಲ್ಪ ಹಣ!

ಗಾಂಧಿಯ ಜನುಮದ ದಿನದಂದು
ಗೆಳೆಯರಿಗೆಲ್ಲ ಕೊಡಲೆಂದು
ಗಾಂಧೀ ಚಿತ್ರವ ತರಲೆಂದು
ಪೇಟೆಯ ಬಸ್ಸನ್ನು ಹತ್ತಿದನು

ಇಳಿದನು ಗಾಂಧೀಜಿ ರಸ್ತೆಯಲಿ
ನಡೆದನು ಇಕ್ಕೆಲ ನೋಡುತಲಿ
ಎಲ್ಲೆಡೆ ಜಗಮಗ ನೋಟಗಳು
ಭಾರೀ ಭಾರೀ ರೇಟುಗಳು

ನಡೆದನು ಮನದಲಿ ಚಿಂತಿಸುತ
ಚಿತ್ರದ ಬೆಲೆಯನು ಊಹಿಸುತ

ಕೇಳಿದ ಗೇಟನು ಕಾಯುವವನ
ಗಾಂಧಿಯು ಸಿಗುವರು ಎಲ್ಲಣ್ಣ ?

ಗಲಿಬಿಲಿಗೊಂಡನು ವಾಚ್ ಮನ್ನು
ತಿಳಿಯದೆ ಎತ್ತಿದ ಕೈಯನ್ನು
ನೋಡುತಲಿದ್ದರು ಹಿರಿಯಜ್ಜ
ಖಾದಿಯ ಧರಿಸಿದ ಮುತ್ತಜ್ಜ

ಕರೆದರು ಸನಿಹಕೆ ಪ್ರೀತಿಯಲಿ
ತಿಳಿದರು ವಿಷಯವ ಹರುಷದಲಿ
ಗಾಂಧಿಯ ಭವನಕೆ ಕರೆದೊಯ್ದು
ಕೊಟ್ಟರು ಚಿತ್ರವ ಆಯ್ದಾಯ್ದು

ಖುಷಿಯಲಿ ಕುಣಿಯುತ ಪಾಪಣ್ಣ
ನಮಿಸಿದ ಅಜ್ಜಗೆ ನೋಡಣ್ಣ !

# ಮಿನ್ನಿ

■ **ಚಂದನ ಜಿ.ಪಿ., ಹೊನ್ನಾಳಿ**

ಮಿಯಾವ್ ಮಿಯಾವ್ ಬೆಕ್ಕಿನ ಮರಿ
ಕಾಲ ಬಳಿ ಬಂತು ತುಂಬಾ ಹೆದರಿ
ಅಟ್ಟಿಸಿ ಬಂದ ಕಂತ್ರಿನಾಯಿ
ಓಡಿಹೋಯ್ತು ಬಾಲ ಮುದುರಿ

ಅಮ್ಮ ಕೊಟ್ಟಳು ಮೊಸರು ಅನ್ನ
ಸುರ್‌ಸುರ್ ತಿಂದಿತು ಹೊಟ್ಟೆ ತುಂಬಾ
'ಮಿನ್ನಿ ' ಎಂದು ಹೆಸರನು ಇಟ್ಟೆನು
ಬೆಕ್ಕಿನ ಜೊತೆಯಲಿ ಆಡಿದೆನು



ಬೆಳಗ್ಗೆಸಂಜೆ ಹೊರಗುಒಳಗು
ಮಿಯಾವ್‌ಮಿಯಾವ್ ಮಿನ್ನಿ ಕೂಗು
ನುಗ್ಗೆ ಬಿಟ್ಟಿತು ದೇವರ ಮನೆಗೂ
ಅಜ್ಜಿಗೆ ತುಂಬಾ ಕಿರಿಕಿರಿಯಾಯಿತು

ಮಲಗಿರುವಾಗ ನಾನಿನ್ನು
ಹನುಮಿಯ ಬರ ಹೇಳಿದರು
ಗೋಣಿ ಚೀಲದಿ ಮಿನ್ನಿಯ ಹಾಕಿ
ದೂರದಿ ಬಿಡಲು ಹೇಳಿದರು

ಎದ್ದು ಬಂದರೆ ಕಾಣಲೇ ಇಲ್ಲ
ಮಿನ್ನಿಯ ಮಿಯಾವ್ ಶಬ್ದವೇ ಇಲ್ಲ
ಅಜ್ಜಿಯ ಜೊತೆ ಟೂಟೂ ಬಿಟ್ಟು
ತಿಂಡಿತೀರ್ಥವ ಮಾಡಲೇ ಇಲ್ಲ

ಮಿನ್ನಿಯ ನೆನೆಯುತ ಕೂತಿರಲು
ದೂರದಿ ಹೊಳೆವ ಮಿನ್ನಿಯ ಕಣ್ಣಳು
ಓಡಿ ಬರಲು ಮಿಯಾವ್ ಎನ್ನುತ
ಅಜ್ಜಿಯು ಬೆರಗಲಿ ನೋಡಿದರು!

ಇಬ್ಬರ ಹೊಟ್ಟೆಯ ತಾಳವ ಕೇಳಿ
ತಿಂಡಿ ತಿನ್ನಲು ಓಡಿದೆವು

■